717 ಶ್ರೀ ಬೆಳ್ಳುಬ್ಬಿ ಸಂಗಪ್ಪ (ಬಸವನ ಬಾಗೇವಾಡಿ) : ಮಾನ್ಯ ಜವಳಿ, ಯುವಜನ ಸೇವೆ ಹಾಗೂ ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆ, ಬಸವನಬಾಗೇವಾಡಿ ಮತಕ್ಷೇತ್ರದಲ್ಲಿ ಬರುವ ಕೊಲ್ಲಾರ, ನಿಡಗುಂದಿ, ಗೊಳಸಂಗಿ, ಬೇನಾಳ (ಆರ್.ಎಸ್) ವಂದಾಲ, ಮುತ್ತಗಿ, ಇಂಗಳೇಪುರ ಮುಂತಾದ ಗ್ರಾಮಗಳ ನೇಕಾರ ಸಮಾಜದವರಿಗೆ ಸಮುದಾಯ ಭವನ ಹಾಗೂ ವಸತಿ ಸೌಲಭ್ಯ ಕಲ್ಪಿಸಿಕೊಡುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮವೇನು;

ಇ) ನೇಕಾರ ಸಮಾಜದವರು ಆರ್ಥಿಕ ಪರಿಸ್ಥಿತಿಯಿಂದ ಅತೀ ಹಿಂದುಳಿದಿದ್ದು, ಆರ್ಥಿಕ ಪರಿಸ್ಥಿತಿಯನ್ನು ಬಲಪಡಿಸಲು ಇವರಿಗೆ ಸರ್ಕಾರದಿಂದ ಯಾವ ಯಾವ ವಿಶೇಷ ಯೋಜನೆಗಳನ್ನು ಕೈಗೊಳ್ಳಲಾಗಿದೆ?

ಶ್ರೀ ಗೂಳಿಹಟ್ಟಿ ಡಿ.ಶೇಖರ್ (ಜವಳಿ, ಯುವಜನ ಸೇವೆ ಹಾಗೂ ಕ್ರೀಡಾ ಸಚಿವರು) :

ಅ) ಹೌದು.

ಆ)

1. ಸಮುದಾಯ ಭವನಗಳನ್ನು ನಿರ್ಮಿಸುವ ಯೋಜನೆ ಕೈಮಗ್ಗ ಮತ್ತು ಜವಳಿ ಇಲಾಖೆಯಲ್ಲಿ ಇರುವುದಿಲ್ಲ.
2. ಕೇಂದ್ರ ಪುರಸ್ಕೃತ ಐ.ಹೆಚ್.ಡಿ.ಎಸ್. ಯೋಜನೆಯಡಿ ನಿಡಗುಂದಿ ಗ್ರಾಮವನ್ನು ಕ್ಲಸ್ಟರ್ ಗ್ರಾಮವನ್ನಾಗಿ ಆಯ್ಕೆ ಮಾಡಲಾಗಿರುತ್ತದೆ. ಸದರಿ ಯೋಜನೆಯನ್ನು ನಿಡಗುಂದಿ ಗ್ರಾಮಕ್ಕೆ ರೂ.12.00 ಲಕ್ಷ ಮೌಲ್ಯದ ಸಾಮಾನ್ಯ ಸೌಲಭ್ಯ ಕೇಂದ್ರವನ್ನು ನಿರ್ಮಾಣ ಮಾಡಲು ಆರ್ಥಿಕ ನೆರವು ಮಂಜೂರಾಗಿದ್ದು, ಹಣ ಬಿಡುಗಡೆಗೆ ಕ್ರಮ ಜರುಗಿಸಲಾಗಿದೆ.
3. 2009–10ನೇ ಸಾಲಿನ ರಾಜ್ಯ ವಲಯ ಯೋಜನೆಯಲ್ಲಿ ಬಿಜಾಪುರ ಜಿಲ್ಲೆಗೆ 50 ಕೈಮಗ್ಗ ನೇಕಾರರಿಗೆ ವಸತಿ ಕಾರ್ಯಾಗಾರಗಳನ್ನು ನಿರ್ಮಿಸುವ ಗುರಿ ನಿಗದಿಪಡಿಸಲಾಗಿದ್ದು, ಈ ಯೋಜನೆಯಡಿ ಬಸವನಬಾಗೇವಾಡಿ ಮತಕ್ಷೇತ್ರದಲ್ಲಿ ಬರುವ ಅರ್ಹ ನೇಕಾರರಿಗೆ ವಸತಿ ಕಾರ್ಯಾಗಾರ ಸೌಲಭ್ಯ ಕಲ್ಪಿಸಲಾಗುವುದು.

4. 2006–07ನೇ ಸಾಲಿನಲ್ಲಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಯೋಜನೆಯಲ್ಲಿ ಬಸವನಬಾಗೇವಾಡಿ ತಾಲ್ಲೂಕಿನ 313 ಕೈಮಗ್ಗ ನೇಕಾರರಿಗೆ ವಸತಿ ಕಾರ್ಯಾಗಾರ ಮಂಜೂರಾಗಿದ್ದು ವಸತಿ ಕಾರ್ಯಗಾರಗಳ ಕಟ್ಟಡಗಳ ನಿರ್ಮಾಣವು ಪೂರ್ಣಗೊಳ್ಳುವ ಹಂತದಲ್ಲಿದೆ.
5. ಜಿಲ್ಲಾ ವಲಯ ಯೋಜನೆಯಲ್ಲಿ ಗೊಳಸಂಗಿ ಗ್ರಾಮದ ನೇಕಾರರಿಗೆ 12 ವಸತಿ ಕಾರ್ಯಾಗಾರಗಳನ್ನು ನಿರ್ಮಿಸಿಕೊಡಲಾಗಿದೆ.

ಇ) ಬಸವನಬಾಗೇವಾಡಿ ತಾಲ್ಲೂಕಿನ ನೇಕಾರರ ಆರ್ಥಿಕ ಪರಿಸ್ಥಿತಿಯನ್ನು ಬಲಪಡಿಸುವ ನಿಟ್ಟಿನಲ್ಲಿ ಇಲಾಖೆಯಿಂದ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

1. **ಕೇಂದ್ರ ಪುರಸ್ಕೃತ ಐ.ಹೆಚ್.ಡಿ.ಎಸ್. ಯೋಜನೆ :**

ಈ ಯೋಜನೆಯಡಿ ನಿಡಗುಂದಿ ಗ್ರಾಮವನ್ನು ಕ್ಲಸ್ಟರ್ ಗ್ರಾಮವನ್ನಾಗಿ ಆಯ್ಕೆ ಮಾಡಿದ್ದು, ಒಟ್ಟು ರೂ.57.45 ಲಕ್ಷಗಳಲ್ಲಿ ಕ್ಲಸ್ಟರ್‌ನ್ನು ಅಭಿವೃದ್ಧಿಗೊಳಿಸಲಾಗುತ್ತಿದೆ. ಮೊದಲನೆ ಕಂತಿನಲ್ಲಿ ಕೇಂದ್ರ ಸರ್ಕಾರದಿಂದ ರೂ.16.625 ಲಕ್ಷ ಹಾಗೂ ರಾಜ್ಯದ ಪಾಲಿನ ರೂ.2.90 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ಕ್ಲಸ್ಟರ್‌ನ ಅಭಿವೃದ್ಧಿ ಕಾರ್ಯ ಪ್ರಗತಿಯಲ್ಲಿದೆ.

2. **ವಿಶೇಷ ಘಟಕ ಯೋಜನೆ :**

ಬಸವನಬಾಗೇವಾಡಿ ತಾಲ್ಲೂಕಿನ ಚಿಮ್ಮಲಗಿ ಮತ್ತು ವಂದಾಲ ಗ್ರಾಮದ ಪರಿಶಿಷ್ಟ ಜಾತಿಯ 63 ಫಲಾನುಭವಿಗಳಿಗೆ ನೇಕಾರಿಕೆ ತರಬೇತಿ, ಮಗ್ಗ ಸರಬರಾಜು, ವಸತಿ ಕಾರ್ಯಾಗಾರ ನಿರ್ಮಿಸಲು ರೂ.13.97 ಲಕ್ಷಗಳ ಅನುದಾನ ಮಂಜೂರಾಗಿದ್ದು, ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ.

3. **ಗಿರಿಜನ ಉಪಯೋಜನೆ :**

ಬಸವನಬಾಗೇವಾಡಿ ತಾಲ್ಲೂಕಿನ ವಂದಾಲ ಗ್ರಾಮದ ಪರಿಶಿಷ್ಟ ಪಂಗಡದ 20 ಫಲಾನುಭವಿಗಳಿಗೆ ನೇಕಾರಿಕೆ ತರಬೇತಿ ಮತ್ತು ಹೊಸ ಸದಸ್ಯರುಗಳಿಗೆ ಶೇರು ಬಂಡವಾಳಕ್ಕಾಗಿ ರೂ.1.22 ಲಕ್ಷಗಳ ಅನುದಾನ ಮಂಜೂರಾಗಿದ್ದು, ಕಾರ್ಯಕ್ರಮವನ್ನು ಅನುಷ್ಠಾನ –ಗೊಳಿಸಲಾಗುತ್ತಿದೆ.

4. **ಜಿಲ್ಲಾ ವಲಯ ಯೋಜನೆ :**

2008–09ನೇ ಸಾಲಿನಲ್ಲಿ ಗೋನಾಳ ಹಾಗೂ ನಿಡಗುಂದಿಯ 2 ಸಹಕಾರ ಸಂಘಗಳಿಗೆ ಒಟ್ಟು ರೂ.1.32 ಲಕ್ಷಗಳ ದುಡಿಮೆ ಬಂಡವಾಳ ಮಂಜೂರಾಗಿದೆ. ಮುತ್ತಗಿ ಗ್ರಾಮದ ಸಂಘಕ್ಕೆ 10 ಫಲಾನುಭವಿಗಳಿಗೆ ಕೈಮಗ್ಗ ನೇಕಾರಿಕೆ ತರಬೇತಿಗಾಗಿ ರೂ. 0.45 ಲಕ್ಷ ಮಂಜೂರಾಗಿದ್ದು, ತರಬೇತಿ ಕಾರ್ಯಕ್ರಮ ಪ್ರಾರಂಭಿಸಲಾಗಿದೆ.

2009–10ನೇ ಸಾಲಿನಲ್ಲಿ ಬಸವನಬಾಗೇವಾಡಿ ತಾಲ್ಲೂಕಿನ 6 ಸದಸ್ಯರುಗಳಿಗೆ ವಸತಿ ಕಾರ್ಯಾಗಾರ ನಿರ್ಮಿಸಲು ಮತ್ತು 10 ಫಲಾನುಭವಿಗಳಿಗೆ ಕೈಮಗ್ಗ ನೇಕಾರಿಕೆ ತರಬೇತಿಗಾಗಿ ಅನುದಾನ ಹಂಚಿಕೆ ಮಾಡಿಕೊಳ್ಳಲಾಗಿದ್ದು, ಜಿಲ್ಲಾ ಪಂಚಾಯತ್ ಅನುಮೋದನೆ ನಂತರ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುವುದು.

5. **ವಿಮಾ ಯೋಜನೆ :**

ಬಸವನಬಾಗೇವಾಡಿ ತಾಲ್ಲೂಕಿನಲ್ಲಿ ಮಹಾತ್ಮಗಾಂಧಿ ಬುನ್ಕರ್ ಬಿಮಾ ಯೋಜನೆಯಡಿ 452 ಕೈಮಗ್ಗ ನೇಕಾರರನ್ನು ಹಾಗೂ ಆರೋಗ್ಯ ವಿಮಾ ಯೋಜನೆಯಡಿ 676 ನೇಕಾರರನ್ನು ಸದರಿ ಅಳವಡಿಸಿಕೊಳ್ಳಲಾಗಿದೆ. ಈ ತಾಲ್ಲೂಕಿನ 99 ವಿದ್ಯಾರ್ಥಿಗಳಿಗೆ ರೂ.56,400/–ಗಳ ವಿದ್ಯಾರ್ಥಿ ವೇತನವನ್ನು ಶಿಕ್ಷಾ ಸಹಯೋಗ ಯೋಜನೆಯಡಿ ಬಿಡುಗಡೆ ಮಾಡಲಾಗಿದೆ.

6. **ನೇಕಾರರ ಕಲ್ಯಾಣ ಯೋಜನೆ :**

ಈ ಯೋಜನೆಯಡಿ 2008–09ನೇ ಸಾಲಿನಲ್ಲಿ ಬಸವನ ಬಾಗೇವಾಡಿ ತಾಲ್ಲೂಕಿನ 75 ವಿದ್ಯಾರ್ಥಿಗಳಿಗೆ ರೂ.51,650/–ಗಳ ವಿದ್ಯಾರ್ಥಿ ವೇತನವನ್ನು ಬಿಡುಗಡೆ ಮಾಡಲಾಗಿದೆ.

7. **ಶೇಕಡಾ 20 ರಿಬೇಟ್ :**

ಬಸವನಬಾಗೇವಾಡಿ ತಾಲ್ಲೂಕಿನ ದಿ ಪ್ರಾಥಮಿಕ ಕೈಮಗ್ಗ ಸೇವಾ ಸಹಕಾರ ಸಂಘ, ಗೊಳಸಂಗಿ ಈ ಸಂಘಕ್ಕೆ 2008–09ನೇ ಸಾಲಿನಲ್ಲಿ ಶೇಕಡಾ 20 ರಿಬೇಟ್ ಆಗಿ ರೂ.61,456/– ಮಂಜೂರು ಮಾಡಲಾಗಿದೆ.

8. ಮಿತವ್ಯಯನಿಧಿ ಯೋಜನೆ :

2008–09ನೇ ಸಾಲಿನಲ್ಲಿ ಬಸವನಬಾಗೇವಾಡಿ ತಾಲ್ಲೂಕಿನ ಕೈಮಗ್ಗ ನೇಕಾರರಿಗೆ ರೂ.3.04 ಲಕ್ಷಗಳನ್ನು ಮಿತವ್ಯಯನಿಧಿ ಬಡ್ಡಿ ಮಂಜೂರು ಮಾಡಲಾಗಿದೆ ಹಾಗೂ ರೂ.8784/–ಗಳ ಸರ್ಕಾರದ ಅಂಶದನ ಮಂಜೂರಾಗಿರುತ್ತದೆ.

9. ಇತರೆ

ಅ) ಬಸವನಬಾಗೇವಾಡಿ ತಾಲ್ಲೂಕಿನ ಒಟ್ಟು 301 ನೇಕಾರರಿಗೆ 2008–09ನೇ ಸಾಲಿನಲ್ಲಿ ನೇತ್ರ ತಪಾಸಣೆ ನಡೆಸಿ ಉಚಿತ ಕನ್ನಡಕ ವಿತರಿಸಲಾಗಿದೆ.

ಆ) ಬಸವನಬಾಗೇವಾಡಿ ತಾಲ್ಲೂಕಿನಲ್ಲಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ನಿಡಗುಂದಿ, ಗೊಳಸಂಗಿ, ವಂದಾಲ, ಬೇನಾಳ ಮತ್ತು ಕೊಲ್ಹಾರ ಗ್ರಾಮಗಳಲ್ಲಿನ ಉಪ ಕೇಂದ್ರಗಳ ಮುಖಾಂತರ 2008–09ನೇ ಸಾಲಿನಲ್ಲಿ ಕೈಮಗ್ಗ ನೇಕಾರರಿಗೆ ರೂ.98.73 ಲಕ್ಷಗಳ ಕಚ್ಚಾಮಾಲನ್ನು ಒದಗಿಸಲಾಗಿದೆ. ರೂ.51.97 ಲಕ್ಷಗಳ ಮಜೂರಿಯನ್ನು ಪಾವತಿಸಿ ರೂ.150.51 ಲಕ್ಷ ಮೌಲ್ಯದ ಕೈಮಗ್ಗ ಉತ್ಪನ್ನಗಳನ್ನು ಉತ್ಪಾದಿಸಲಾಗಿದೆ.

440 ಶ್ರೀ ಕುಮಾರಸ್ವಾಮಿ, ಕೆ.ಜಿ. (ಶಿವಮೊಗ್ಗ ಗ್ರಾಮಾಂತರ ಕ್ಷೇತ್ರ) : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭದ್ರಾ ಕಾಡಾ ವ್ಯಾಪ್ತಿಯಲ್ಲಿನ ಕೆರೆಗಳು ಎಷ್ಟು? ಶಿವಮೊಗ್ಗ, ಭದ್ರಾವತಿ, ಹೊನ್ನಾಳಿ, ತಾಲ್ಲೂಕುಗಳಲ್ಲಿ ಎಷ್ಟು ಕೆರೆಗಳು ಹೂಳು ತುಂಬಿ ಒತ್ತುವರಿಯಾಗಿವೆ? (ಪೂರ್ತಿ ವಿವರ ಒದಗಿಸುವುದು);

ಆ) ತುಂಗಾ ನಾಲಾ ಆಧುನೀಕರಣವನ್ನು 2009–10ನೇ ಸಾಲಿನಲ್ಲಿ ಕೈಗೆತ್ತಿಕೊಳ್ಳಲು ಸಾರ್ವಜನಿಕರಿಂದ ಬೇಡಿಕೆ ಬಂದಿದೆಯೇ; ಈ ಬಗ್ಗೆ ಸರ್ಕಾರದ ಮಟ್ಟದಲ್ಲಿ ತೆಗೆದುಕೊಂಡ ಕ್ರಮಗಳೇನು?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :

ಅ) ಭದ್ರಾ ಕಾಡಾ ವ್ಯಾಪ್ತಿಯಲ್ಲಿ ತುಂಗಾ ಮೇಲ್ದಂಡೆ ಯೋಜನಾ ವಲಯ, ಶಿವಮೊಗ್ಗಕ್ಕೆ ಸಂಬಂಧಿಸಿದಂತೆ, ಒಟ್ಟು 826 ಕೆರೆಗಳು ಇರುತ್ತವೆ. ಶಿವಮೊಗ್ಗ, ಭದ್ರಾವತಿ ಹಾಗೂ ಹೊನ್ನಾಳಿ ತಾಲ್ಲೂಕಿನಲ್ಲಿ ಕೆರೆಗಳು ಹೂಳು